ಸಿದ್ಧ ಉಡುಪು ತಯಾರಿಕಾ ಘಟಕ ಪ್ರಾರಂಭಿಸುವುದು

2086 (3425); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಸಿದ್ಧ ಉಡುಪು ತಯಾರಿಕಾ ಘಟಕ ತೆರೆಯುವ ಪ್ರಸ್ತಾವ ಸರ್ಕಾರದ ಮುಂದಿದೆಯೇ:

ಆ) ಈ ಸಿದ್ಧ ಉಡುಪು ತಯಾರಿಕಾ ಘಟಕ ಪ್ರಾರಂಭಿಸಿದಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸಿದಂತಾಗುತ್ತದೆ ಎಂಬ ಬಗ್ಗೆ ಸರ್ಕಾರದ ನಿಲುವೇನು:

ಇ) ಈ ಸಂಬಂಧ ಯಾವುದಾದರೂ ಸಂಸ್ಥೆಗಳು ಸಿದ್ಧ ಉಡುಪು ಕಾರ್ಖಾನೆ ತೆರೆಯಲು ಮುಂದೆ ಬಂದಿದೆಯೇ; (ವಿವರ ನೀಡುವುದು)?

ಶ್ರೀ ಬಾಬುರಾವ್ ಚಿಂಚನಸೂರ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಇಂತಹ ಪ್ರಸ್ತಾವನೆಗಳಾವುವು ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅಂತಹ ಯಾವುದೇ ಸಂಸ್ಥೆಗಳು ಮುಂದೆ ಬಂದಿರುವುದಿಲ್ಲ.

ಕಂದಾಯ ಗ್ರಾಮಗಳ ಪರಿವರ್ತನಾ ಯೋಜನೆ

2087 (2132); ಶ್ರೀ ಅಶೋಕ್ ಆರ್. (ಪದ್ಮನಾಭನಗರ)

ಅ) ರಾಜ್ಯದಲ್ಲಿ ಕಂದಾಯ ಗ್ರಾಮಗಳಲ್ಲದ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಗ್ರಾಮಭಾಗ್ಯ ಕಲ್ಪಿಸುವ ಯೋಜನೆ ಯಾವ ಹಂತದಲ್ಲಿದೆ:

ಆ) ರಾಜ್ಯದಲ್ಲಿರುವ ಇಂತಹ ತಾಂಡಾ ಮತ್ತು ಹಟ್ಟಿಗಳ ಸಂಖ್ಯೆಗಳೆಷ್ಟು: ಜಿಲ್ಲಾವಾರು ವಿವರಗಳನ್ನು ನೀಡುವುದು:

ಇ) ಇವುಗಳ ಪುರುಜ್ಜೀವನ ಕಾಯಕಲ್ಪಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ಎಷ್ಟು:

ಈ) ಈಗಾಗಲೇ ಆದೇಶ ಹೊರಡಿಸಲ್ಪಟ್ಟಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಈ ತಾಂಡಾ/ಹಟ್ಟಿಗಳು ಕಂದಾಯ ಗ್ರಾಮದ ಸ್ಥಾನಮಾನ ಲಭಿಸದಿರುವುದಕ್ಕೆ ಕಾರಣಗಳೇನು: ಇದಕ್ಕೆ ಕಾರಣರಾರು: ಅಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗುವುದು:

ಉ) ಇವುಗಳನ್ನು ಹಂತ ಹಂತವಾಗಿ ಪರಿವರ್ತಿಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ: ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ: ಕಾಲಮಿತಿಯೊಳಗೆ ಹಮ್ಮಿಕೊಳ್ಳುವ ಯೋಜನೆಯ ವಿವರಗಳನ್ನು ಒದಗಿಸುವುದು:

ಊ) ಈ ನಿಟ್ಟಿನಲ್ಲಿ ಕಳೆದ ಒಂದು ವರ್ಷದಲ್ಲಿ ಲಂಬಾಣೀ ತಾಂಡಾ (ಬಂಜಾರ) ಅಭಿವೃದ್ಧಿ ಮಂಡಳಿಯು ಕೈಗೊಂಡ ಯೋಜನೆಗಳಾವುವು: ಮಂಡಳಿಯ ಕರ್ತವ್ಯವೇನು?

ಶ್ರೀ ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಭೂದಾಪು 2013, ದಿನಾಂಕ: 20–07–2013ರಲ್ಲಿ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಆದೇಶ ಹೊರಡಿಸಲಾಗಿದ್ದು. ಈ ಆದೇಶದಲ್ಲಿನ ಹಾಗೂ ಇತರೆ ಷರತ್ತುಗಳನ್ನು ಪೂರೈಸುವಂತಹವುಗಳನ್ನು ಒಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರುಗಳಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ. ಇವರುಗಳಿಂದ ಪೂರ್ಣ ಪ್ರಮಾಣದ ಪ್ರಸ್ತಾವನೆಯು ಸ್ವೀಕೃತವಾದ ನಂತರ ಅರ್ಹ ಪ್ರಕರಣಗಳಲ್ಲಿ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ರಚಿಸಲಾಗುವುದು.

ಆ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸಿದ ನಂತರ ಇವುಗಳ ಪುನರುಜ್ಜೀವನ ಕಾಯಕಲ್ಪವನ್ನು ಗ್ರಾಮಪಂಚಾಯಿತಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬಿಡುಗಡೆ ಮಾಡುವ ಅನುದಾನದಲ್ಲಿ ನಿರ್ವಹಿಸಬೇಕಿರುತ್ತದೆ.

ಈ) ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಭೂದಾಪು 2013, ದಿನಾಂಕ: 20–07–2013ರಲ್ಲಿ ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಆದೇಶ ಹೊರಡಿಸಲಾಗಿದೆ. ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಗ್ರಾಮಪಂಚಾಯಿತಿಗಳ ಠರಾವುಗಳು, ಗ್ರಾಮಗಳ ಸರಹದ್ದು ಮತ್ತು ಸರ್ವೆ ನಂಬರ್‌ಗಳ ಬೇರ್ಪಡಿಸುವಿಕೆಗೆ ಸಮಯಾವಕಾಶ ಬೇಕಾಗುತ್ತದೆ. ಕೆಲವೊಂದು ಗ್ರಾಮಗಳು ಅರಣ್ಯ ಮತ್ತು ಖಾಸಗಿ ಜಮೀನಿನಲ್ಲಿ ಬರುತ್ತಿರುವುದರಿಂದ ಅವುಗಳನ್ನು ಕಾನೂನಾತ್ಮಕವಾಗಿ ಪರಿಹರಿಸಿ ಗ್ರಾಮಗಳನ್ನಾಗಿ ಘೋಷಿಸಬೇಕಿದೆ. ಆದುದರಿಂದ ಗ್ರಾಮಗಳನ್ನು ಘೋಷಿಸಲು ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಕೆಲವು ಸಮಸ್ಯೆಗಳನನು ಪರಿಹರಿಸುವಲ್ಲಿ ಸಮಯಾವಕಾಶ ಬೇಕಿರುತ್ತದೆ. ಇದಾದ ನಂತರ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆದು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಅನ್ವಯ ಪರಿಶೀಲಿಸಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಪರಿಶೀಲನೆ ನಂತರ ಮಾನ್ಯ ಕಂದಾಯ ಸಚಿವರ ಅನುಮೋದನೆ ಪಡೆದು ಕರಡು ಅಧಿಸೂಚನೆಯನ್ನು ಹೊರಡಿಸಿ, ಭಾದಿತರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅವುಗಳನ್ನು ಪರಿಶೀಲಿಸಿ ನಂತರ ಅಂತಿಮ ಅಧಿಸೂಚನೆ ಹೊರಡಿಸಬೇಕಾಗುತ್ತದೆ. ನಂತರ ಇವುಗಳಿಗೆ ಕಂದಾಯ ಗ್ರಾಮದ ಸ್ಥಾನಮಾನ ದೊರಕುವುದು. ಆದ್ದರಿಂದ ಉದ್ದೇಶಪೂರ್ವಕವಾಗಿ ವಿಳಂಬಕ್ಕೆ ಯಾರೂ ಕಾರಣರಾಗಿರುವುದಿಲ್ಲ.

ಊ) ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸುವ ಪ್ರಕ್ರಿಯೆಯಲ್ಲಿ ಸರ್ವೆ ನಂಬರ್‌ಗಳ ಗುರುತಿಸುವಿಕೆ, ಇವುಗಳನ್ನು ಮೂಲ ಗ್ರಾಮದಿಂದ ಬೇರ್ಪಡಿಸುವುವಿಕೆ ಹಾಗೂ ಈ ಸಂಬಂಧ ಗ್ರಾಮಪಂಚಾಯಿತಿಗಳ ನಿರಾಕ್ಷೇಪಣೆಯನ್ನು ಪಡೆಯುವುದು ದೀರ್ಘಕಾಲದ ಪ್ರಕ್ರಿಯೆಯಾಗಿರುವುದರಿಂದ ಇದು ಕಾಲಮಿತಿಗೊಳಪಟ್ಟಿರುವುದಿಲ್ಲ.

ಋ) ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಹಲವು ವರ್ಷಗಳಿಂದ ಬಹುಕಾಲ ತಾಂಡಾಗಳು ಕಂದಾಯ ಗ್ರಾಮವಾಗಿ ಪರಿವರ್ತನೆಗೊಳ್ಳದಿರುವುದನ್ನು ಗಮನಿಸಿ 2013–14ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವಲ್ಲಿ ಸರ್ಕಾರಕ್ಕೆ ನೆರವಾಗಲು ಈ ಪ್ರಕ್ರಿಯೆಯಲ್ಲಿ ಕಂಡು ಬರುತ್ತಿರುವ ತಾಂತ್ರಿಕ ಕಾನೂನು ಮತ್ತು ಆಡಳಿತಾತ್ಮಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ದಿನಾಂಕ 3.2.2014ರಂದು ನಡೆದ 18ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲು ತೀರ್ಮಾನ ಕೈಗೊಂಡಿದೆ. ಅದರಂತೆ ಶ್ರೀ ಕೆ. ನರಸಿಂಹಯ್ಯ, ನಿವೃತ್ತ ಕೆ.ಎ.ಎಸ್.ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 25.4.2014ರಂದು ತಜ್ಞರ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ. ಸದರಿ ಸಮಿತಿಯು ಜಿಲ್ಲೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಣೆ ಮಾಡುತ್ತಿದ್ದು, ಸಮಸ್ಯೆಗಳನ್ನು ಗುರುತಿಸುವ ಕಾರ್ಯ ಮಾಡುತ್ತಿದೆ.

ಕಂಡಿಕೆ 90 ಭಾದಾಮಿ 2014ಕ್ಕೆ ಅನುಬಂಧ

ರಾಜ್ಯದಲ್ಲಿರುವ ಲಂಬಾಣಿ ತಾಂಡ, ಹ್ಯಾಮ್ಲೆಟ್, ಗೊಲ್ಲರ ಹಟ್ಟಿ ಇತ್ಯಾದಿಗಳ ವಿವರಗಳು (ಕಂದಾಯ ಗ್ರಾಮಗಳಾಗಿ ಪರಿವರ್ತಿಸಿರುವ ಹಾಗು ಬಾಕಿಯಿರುವ ಪಟ್ಟಿ

ಕ್ರ ಸಂ	ಜಿಲ್ಲೆ	ಲಂಬಾಣಿ ತಾಂಡಾ			ಹ್ಯಾಮ್ಲೆಟ್			ಗೊಲ್ಲರಹಟ್ಟಿ				ದತ್ತರಹಟ್ಟಿ			ಮಜರೆ ಗ್ರಾಮ			ತಾಯಕರ ಹಟ್ಟಿ			ತಾಂಡೀಗಳು			ಕ್ಯಾಂಪ್ ಕಾಲೋನಿ			ಒಟ್ಟು		
		ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ	ಒಟ್ಟು ಸಂಖ್ಯೆ	ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಜನ ಸಂಖ್ಯೆ	ಬಾಕಿ
1	ಚಿಕ್ಕಮಗಳೂರು	40	19	21	2915	0	2915	17	1	16	17	0	17	15	0	15	0	0	0	0	0	0	3	0	3	3007	20	2987
2	ಮೈಸೂರು	6	0	6	616	3	613	0	0	0	0	0	0	0	0	0	0	0	0	201	0	201	0	0	0	823	3	820
3	ರಾಮರಾಜನಗರ	7	0	7	513	0	513	0	0	0	0	0	0	0	0	0	0	0	0	53	0	53	27	0	27	600		600
4	ಉಡುಪಿ	ಯಾವುದು ಇರುವುದಿಲ್ಲ																										
5	ದಾವಣಗೆರೆ	161	44	117	16	6	10	0	0	0	0	0	0	0	0	0	0	0	0	0	0	0	9	0	9	186	50	136
6	ಬೆಂಗಳೂರು(ನಗರ)	8	8	0	91	91	0	0	0	0	0	0	0	17	17	0	0	0	0	0	0	0	1	1	0	117	117	0
7	ಬೆಂಗಳೂರು (ಗ್ರಾಮಾಂತರ)	10	2	8	0	0	0	0	0	0	0	0	0	0	0	0	0	0	0	0	0	0	0	0	0	10	2	8
8	ಕೋಲಾರ	20	0	20	0	0	0	0	0	0	0	0	0	385	0	385	0	0	0	0	0	0	0	0	0	405	0	405
9	ರಾಮನಗರ	35	0	35	0	0	0	0	0	0	0	0	0	0	0	0	0	0	0	0	0	0	0	0	0	35	0	35
10	ಚಿಕ್ಕಬಳ್ಳಾಪುರ	3	1	2	0	0	0	0	0	0	0	0	0	0	0	0	0	0	0	0	0	0	0	0	0	3	1	2
11	ತುಮಕೂರು	86	2	84	0	0	0	0	0	0	0	0	0	0	0	0	0	0	0	0	0	0	0	0	0	86	2	84

12	ಚಿತ್ರದುರ್ಗ	15	0	15	0	0	0	0	0	0	0	0	0	0	0	0	0	0	0	0	0	0	0	0	0	0	15	0	15
13	ದಾವಣಗೆರೆ	94	17	77	0	0	0	0	0	0	0	0	0	0	0	0	0	0	0	0	0	0	0	0	0	0	94	17	77
14	ಶಿವಮೊಗ್ಗ	70	8	62	0	0	0	0	0	0	0	0	0	0	0	0	0	0	0	0	0	0	0	0	0	0	70	8	62
15	ಗುಲ್ಬರ್ಗಾ	64	64	0	0	0	0	0	0	0	0	0	0	0	0	0	0	0	0	0	0	0	0	0	0	0	64	64	0
16	ಬಳ್ಳಾರಿ	67	8	59	0	0	0	0	0	0	0	0	0	0	0	0	0	0	0	0	0	0	0	0	0	0	67	8	59
17	ಬೀದರ	208	6	202	0	0	0	0	0	0	0	0	0	0	0	0	0	0	0	0	0	0	0	0	0	0	208	6	202
18	ಕೊಪ್ಪಳ	39	4	35	1	0	1	0	0	0	0	0	0	0	0	0	0	0	0	0	0	0	1	0	1	41	4	37	
19	ರಾಯಚೂರು	71	0	71	0	0	0	0	0	0	0	0	0	0	0	0	0	0	0	0	0	0	1	1	0	72	1	71	
20	ಮಂಡ್ಯ	0	0	0	670	0	670	6	0	6	3	0	3	18	0	18	1	0	1	0	0	0	0	0	0	698	0	698	
21	ಬಾಗಲಕೋಟೆ	37	20	17	0	0	0	0	0	0	0	0	0	1	0	1	0	0	0	0	0	0	0	0	0	38	20	18	
22	ಬೆಳಗಾವಿ	22	15	7	0	0	0	0	0	0	0	0	0	278	64	214	0	0	0	0	0	0	0	0	0	300	79	221	
23	ವಿಜಾಪುರ	175	51	124	0	0	0	0	0	0	0	0	0	18	18	0	0	0	0	0	0	0	0	0	0	193	69	124	
24	ಧಾರವಾಡ	11	7	4	0	0	0	0	0	0	0	0	0	0	0	0	0	0	0	0	0	0	0	0	0	11	7	4	
25	ಗದಗ	17	17	0	0	0	0	0	0	0	0	0	0	0	0	0	0	0	0	0	0	0	0	0	0	17	17	0	
26	ಹಾವೇರಿ	55	24	31	4	1	3	2	0	2	1	0	1	15	7	8	0	0	0	0	0	0	0	0	0	77	32	45	
27	ಉತ್ತರ ಕನ್ನಡ(ಕಾರವಾರ)	5	4	1	0	0	0	0	0	0	0	0	0	0	0	0	0	0	0	0	0	0	0	0	0	5	4	1	
28	ಹಾಸನ	8	6	2	0	0	0	6	4	2	12	3	9	4	4	0	0	0	0	0	0	0	0	0	0	30	17	13	
29	ಕೊಡಗು	ಯಾವುದು ಇದುವರಿಲ್ಲ																											
30	ದಕ್ಷಿಣ ಕನ್ನಡ	ಯಾವುದು ಇದುವರಿಲ್ಲ																											
	ಒಟ್ಟು	1334	327	1007	4826	101	4725	31	5	26	33	3	30	751	110	641	1	0	1	254	0	254	42	2	40	7272	548	6724	